8)	ಚಾಮರಾಜನಗರ	90	60	75	225
9)	ಚಿಕ್ಕಮಗಳೂರು	0	0	20	20
10)	ಚಿತ್ರದುರ್ಗ	0	45	45	90
11)	ದಕ್ಷಿಣ ಕನ್ನಡ	25	50	65	140
12)	ದಾವಣಗೆರೆ	105	40	80	225
13)	ಧಾರವಾಡ	25	0	0	25
14)	ಗದಗ	0	20	40	60
15)	ಗುಲ್ಬರ್ಗಾ	25	20	85	130
16)	ಹಾಸನ	45	36	90	171
17)	ಹಾವೇರಿ	10	50	60	120
18)	ಕೊಡಗು	0	0	0	0
19)	ಕೋಲಾರ	100	60	100	260
20)	ಕೊಪ್ಪಳ	20	10	25	55
21)	ಮಂಡ್ಯ	110	60	165	335
22)	ಮೈಸೂರು	110	110	125	345
23)	ರಾಯಚೂರು	25	20	45	90
24)	ಶಿವಮೊಗ್ಗ	25	30	55	110
25)	ತುಮಕೂರು	60	40	110	210
26)	ಉಡುಪಿ	580	110	190	880
27)	ಉತ್ತರ ಕನ್ನಡ	415	151	175	741
	ಒಟ್ಟು	2000	1000	2000	5000

ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿಗಾಗಿ ಕಳೆದ ಮೂರು ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ರೂ. 41.00 ಲಕ್ಷ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂ. 31.69 ಲಕ್ಷ ಮತ್ತು ಉಡುಪಿ ಜಿಲ್ಲೆಯಲ್ಲಿ ರೂ. 86.85 ಲಕ್ಷ ಖರ್ಚು ಮಾಡಲಾಗಿದೆ. ಹಾಗೂ ಆರ್.ಐ.ಡಿ.ಎಫ್. ಅಡಿಯಲ್ಲಿ ಉಡುಪಿ ಜಿಲ್ಲೆಯಲ್ಲಿ 9 ರಸ್ತೆ ಹಾಗೂ 1 ಸೇತುವೆಯನ್ನು ನಿರ್ಮಿಸಿ ಒಟ್ಟು ರೂ. 125.00 ಲಕ್ಷ ವೆಚ್ಚ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1 ರಸ್ತೆ, 1 ಸೇತುವೆ ನಿರ್ಮಿಸಿ ರೂ. 44.00 ಲಕ್ಷ ವೆಚ್ಚ ಮಾಡಲಾಗಿದೆ.

ರಾಜ್ಯದಲ್ಲಿ ಬೀಡಿ ಉದ್ಯಮಗಳು ತೀವ್ರವಾದ ನಷ್ಟದಲ್ಲಿರುವ ವಿಚಾರ

1176 (1894) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೀಡಿ ಉದ್ಯಮಗಳು ತೀವ್ರವಾದ ನಷ್ಟದಲ್ಲಿದ್ದು ಲಕ್ಷಾಂತರ ಬೀಡಿ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

ಅ) ರಾಜ್ಯದಲ್ಲಿರುವ ಮಿನಿ ಸಿಗರೇಟ್ ನಿಯಂತ್ರಿಸಲು ತೆರಿಗೆ ಅಧಿಕಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಇ) 20 ಲಕ್ಷ ಬೀಡಿ ಉತ್ಪಾದನೆ ಮಾಡುವ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ರದ್ದುಪಡಿಸಲಾಗುವುದೆ ?

ಈ) ಬೀಡಿ ಉದ್ಯಮದ ನಷ್ಟವನ್ನು ಅಂದಾಜಿಸಿಕೊಂಡು ಬೀಡಿ ಕಾರ್ಮಿಕರಿಗೆ ತೊಂದರೆಯಾಗದಂತೆ ಪರ್ಯಾಯ ಉದ್ಯಮವನ್ನು ಸರ್ಕಾರ ಹಂತಹಂತವಾಗಿ ತರಲು ಪ್ರಯತ್ನಿಸಬಹುದೇ ?

ಶ್ರೀ ಖಿಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) ಬೀಡಿ ಉದ್ಯಮಗಳು ನಷ್ಟದಲ್ಲಿರುವುದು ನಿಜ. ಬೀಡಿ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಸರ್ಕಾರವು ಕನಿಷ್ಟ ವೇತನ, ವೈದ್ಯಕೀಯ ಸೌಲಭ್ಯ, ವಸತಿ, ರಜೆ, ಮನರಂಜನೆ ಇತ್ಯಾದಿ ಸೌಲಭ್ಯಗಳನ್ನು ವಿವಿಧ ಕಾಯ್ದೆಯಡಿಯಲ್ಲಿ ಜಾರಿಗೊಳಿಸಿದೆ.

ಆ) ಈಗಾಗಲೆ ಸಿಗರೇಟಗಳ ಮೇಲೆ ಶೇಕಡ 4 ಪ್ರವೇಶ ತೆರಿಗೆ ಮತ್ತು ವಿಲಾಸ ತೆರಿಗೆ ಶೇಕಡ 4 ರಷ್ಟು ವಿಧಿಸಲಾಗಿದೆ.

ಇ) ಈ ಸಂಸ್ಥೆಗಳಿಗೆ ಕೇಂದ್ರ ಅಬಕಾರಿ ಸುಂಕ ರಿಯಾಯಿತಿಯನ್ನು ಕೇಂದ್ರ ಸರ್ಕಾರವು ನೀಡಿರುವುದರಿಂದ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ರಾಜ್ಯ ಸರ್ಕಾರದಿಂದ ಯಾವುದೇ ತರಹದ ತೆರಿಗೆ ವಿನಾಯಿತಿಯನ್ನು ನೀಡಿರುವುದಿಲ್ಲ.

ಈ) ಬೀಡಿ ಉದ್ಯಮದಲ್ಲಿ ಸುಮಾರು 2.80 ಲಕ್ಷ ಜನ ಕಾರ್ಮಿಕರು ನಿರತರಾಗಿರುತ್ತಾರೆ. ಆದ್ದರಿಂದ, ಸರ್ಕಾರವು ಪರ್ಯಾಯ ಉದ್ಯಮ ವ್ಯವಸ್ಥೆಯನ್ನು ಮಾಡಲು ಸಾಧ್ಯವಾಗಲಾರದು. ಆದಾಗ್ಯೂ ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಧಿ ಎಂಬ ಮಸೂದೆಯನ್ನು ಸರ್ಕಾರವು ತರಲು ಉದ್ದೇಶಿಸಿದೆ. ಹಾಗೂ ಈ ನೌಕರರು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸ್ವಸಹಾಯ ಯೋಜನೆಗಳ ಲಾಭವನ್ನು ಸಹ ಪಡೆಯಬಹುದಾಗಿದೆ.